‘ನಡೀರಿ ದೇವೀ ಸೇವೆಗೆ ನಡೆದೇ ಹೋಗೋ ಮನಸ್ಸು. ನಾನು ಮಾಡಿ ಬಿಟ್ಟೆಯಾಗಿದೆ... ಇದೊಂದು ಸಣ್ಣ ಬೆಟ್ಟ ಅಷ್ಟೇ... ನಂಗೇನೂ ಆಗೂದಿಲ್ಲ... ಹೀಗೆ ಹತ್ತಿ ಹೋಗಿ ಬಂದ್ಮೇಲೆ ಆರೋಗ್ಯ ಸುಧಾರಿಸಲೂ ಬಹುದು...’ ಎಂದು ಆಗ ತಾನೇ ಹತ್ತಲು ಆರಂಭಿಸಿದ್ದು ಮೆಟ್ಟಿಲನ್ನು ಕಣ್ಣಿಗೆ ಒತ್ತಿಕೊಂಡು ತಾನೇ ಮುಂದಾಗಿ ಪ್ರಸಾದ ಏರ ತೊಡಗಿದ. ದೊಡ್ಡ ಬಸವಣ್ಣನನ್ನು ನೋಡಿ ಮುಂದುವರೆದರು. ನಿರ್ಜನವಾದ ಪ್ರಕೃತಿ. ಹಕ್ಕಿಗಳ ಚಿಲಿಪಿಲಿ ಮಾತ್ರ ಆ ನಿಶ್ಯಬ್ದವನ್ನು ಚದುರಿಸುತ್ತಿತ್ತು. ಲಲಿತಾದ್ರಿ ಬಂಗ್ಲೆ ಬರುವ ತನಕ ಒಂದೇ ಸಮ ಹತ್ತಿದ ಮೇಲೆ ಪ್ರಸಾದನಿಗೆ ಮೇಲುಸಿರು ಬರತೊಡಗಿತು.

ಶಿವಣ್ಣ ಹೇಳಿದ, ‘ಹೋಗಿ ಒಂದಿಷ್ಟು ನೀರು ಕುಡಿದು ಸುಧಾರಿಸಿಕೊಂಡು ಮತ್ತೆ ಹತ್ಲಿಕ್ಕೆ ಹತ್ತೋಣ್ರಿ...’

ಪ್ರಸಾದ ಅವನಿಗೆ ಪ್ರಶ್ನೆ ಹಾಕಿದ, ‘ನಿಮಗೆ ಬಾಯಾರಿಕೆ ಏನು...?’

‘ನನ್ನದು ಬಿಡ್ರಿ... ನಿಮ್ಮ ಬಗ್ಗೆ ನಂಗೆ ಚಿಂತಿ.’

‘ನನ್ನ ಚಿಂತೆನ ನನಗೆ ಬಿಡ್ರಿ... ನೀವು ಈ ಬಂಗಲೆ ನೋಡಿದ್ದೀರೇನು?...’

‘ಇಲ್ರಿ. ಬಸ್ನಾಗೆ ಎರಡು ಬಾರಿ ಬಂದಿಕ್ಕಿ... ನೆಟ್ಟಗೆ ಗುಡಿಗೇ ಕರ್ಕೊಂಡ್ ಹೋದ್ರು... ನಡವೆ, ಬಸವಣ್ಣನ್ನ ನೋಡೋಕೆ, ಕೈ ಮುಗಿಯೋಕೆ ಅವಕಾಶ ಕೊಟ್ಟಿದ್ರು ಅಷ್ಟೇ... ಬಸ್ವಣ್ಣ ದೊಡ್ಡದಾಗಿ, ಬಾಳಾ ಚಲೋದಾಗಿ ಐತ್ರಿ... ಅಲ್ಲೇನ್ರಿ?’

‘ಈ ಬಂಗ್ಲೆಲಿ ಹಿಂದಿನ ಕಾಲದಲ್ಲಿ ಮಹಾರಾಜರು ತಂಗಲು ಕಟ್ಟಿಸಿ ಕೊಂಡಿದ್ರು... ಈಗ ಜನಸಾಮಾನ್ಯರೆಲ್ಲಾ ನೋಡಬಹುದು... ಇಲ್ಲೇನಾದ್ರೂ ‘ಟೀ’ ಸಿಕ್ರೆ ಹೋಗಿ ಕುಡೀರಿ... ಹಾಗೆ ನೋಡ್ಕಂಡು ಬನ್ನಿ... ನಾನು ಇಲ್ಲೇ ಮರದ ಕೆಳಗಿನ ಬಂಡೆ ಮೇಲೆ ಕೂತಿರ್‍ತೀನಿ...’

‘ನಿಮ್ಗೆ ಆಸರಿಕೆ ಬ್ಯಾಡ್ರೇನ್ರಿ...?’

‘ನಂಗೆ ಬಾಯಾರಿಕೆ ಇಲ್ಲಪ್ಪಾ... ನೀವು ಹೋಗಿ ಬೇಗ ಬಂದ್ಬಿಡಿ... ಮೇಲೆ ಹೋಗಿ ಬಿಡೋಣ...’

ಈಚೆಗೆ ಸದಾ ಕಾಲ ಎದೆ ಮೇಲೆ ಮೇಲೆ ಹಸ್ತ ಹರಡಿಕೊಳ್ಳುತ್ತಿದ್ದ ಪ್ರಸಾದ ಊದಿದರೆ ಹಾರಿ ಹೋಗುವಂತಾಗಿ ಹೋಗಿದ್ದ. ಅವನು ಬೆಟ್ಟ ಹತ್ತಿ ಹೋದರೂ ಏನೂ ದೇಹದ ನೋವು ತೋರಿಗೊಡದೆ ಹೋದಾಗ ಆಶ್ಚರ್ಯಗೊಂಡ ಶಿವಣ್ಣ ಕೇಳಿದ, ‘ನಿಮಗೆ ಆಯಾಸ ಇಲ್ಲೇನ್ರಿ?’

‘ಇಲ್ಲಪ್ಪಾ... ನೀನೇ ನೋಡ್ತಿದಿಯಲ್ಲಾ...’

ಹೌದು. ಅವನಿಗೆ ಬೆಟ್ಟ ಏರುವಾಗ ಮನಸ್ಸಿನಲ್ಲಿ ಬೇರೆ ಏನೂ ನೆನಪಿನಲ್ಲಿರಲಿಲ್ಲ. ಮೆಟ್ಟಿಲುಗಳ ಮೇಲಷ್ಟೇ ಗಮನ ಇತ್ತು. ಅದಕ್ಕೆ ಮೊದಲು ಸುತ್ತಲ ಪ್ರಕೃತಿಯ ನೆಮ್ಮದಿ ನೋಟ, ಸುತ್ತಲಿನ ಹಸುರು, ಆಗಸದ ನೀಲಿಮ, ಇದಷ್ಟೇ ಅನುಭವಿಸಿದ. ಎಲ್ಲೆಲ್ಲೂ ಕಲಾತ್ಮಕ ಚಿತ್ರಣ ಹರಡಿದ್ದ ಚಾಮುಂಡಿ ಬೆಟ್ಟದ ಭವ್ಯತೆಗೆ ನಮಸ್ಕರಿಸಿಕೊಂಡಿದ್ದ. ಮೆಟ್ಟಲೇರಲು ತೊಡಗಿದ ಮೇಲೆ ಈ ಭಾವನೆಗಳೂ ಸಹ ಮರೆಯಾಗಿಬಿಟ್ಟು, ಕಾಲಿಗೆ ವಿಶ್ರಾಮ ಕೊಡದೆ ಏರಿ ಏರಿ ಕೊನೆಗೆ ನಿಂತು, ಕೆಳಗೆ ಹಾಸಿ ಹರಡಿಕೊಂಡಿದ್ದ ಮೈಸೂರು ನಗರಿಯನ್ನು ಪಕ್ಷಿನೋಟದಿಂದ ಕಂಡ. ಅರಸರ ಮನೆಯು ಇಡೀ ನಗರಕ್ಕೆ ಪದಕವಿಟ್ಟಂತೆ ಕಾಣಿಸಿತು. ಮೌನವಾಗಿಯೇ ಮೈಸೂರನ್ನು ಮೆಚ್ಚಿ ಮೈಮರೆತ ಆ ಕ್ಷಣಗಳಲ್ಲಿ ಪ್ರಸಾದನಿಗೆ ತನ್ನ ಅನಾರೋಗ್ಯವೂ ಮರೆತುಹೋಯಿತು. ಅವನು ಸುಮ್ಮನೇ ಬೆಟ್ಟದ ಕೆಳಗೇ ದೃಷ್ಟಿನೆಟ್ಟು ನಿಂತೇಬಿಟ್ಟದ್ದು ನೋಡಿ ಶಿವಣ್ಣ ರಸಭಂಗ ಮಾಡಿಬಿಟ್ಟ.

‘ಯಾಕಪ್ಪಾ ನಿಂತ್ ಬುಟ್ರೀ...? ಆಯಾಸ ಆಗ್ಲಿಕ್ಕೆ ಹತ್ತಿದೆ ಏನ್ರಿಯಪ್ಪಾ...? ನನ್ನ ಮಾತು ಕೇಳಿ ಬಸ್ಸಿನಾಗ ಬಂದಿದ್ರ ಛಲೊ ಇರ್‍ತಿತ್ತ ಹೌದಲ್ಲೊ...? ಎದೀ ನೋವು ಮತ್ತ ಬಂದಿತೇನ್ರಿ...?’ ಎಂದಾಗ ಮರೆತು ಹೋದ ಅಭ್ಯಾಸ ಮತ್ತೆ ಮರುಕಳಿಸಿದಂತೆ ತಕ್ಷಣ ಹಸ್ತವನ್ನು ಎದೆಯ ಮೇಲೆ ಇಟ್ಟುಕೊಂಡ. ಮುಖ ಬಿಳಿಚಿ ಹೋಗಿತ್ತು.

‘ನೋವು ಇದ್ಯೇನಪ್ಪಾವ್ರಾ...?’ ಚಿಂತಿತನಾದಂತೆ ಶಿವಣ್ಣ ಅವನನ್ನು ನೋಡಿದ.

ಪ್ರಸಾದ ಇಲ್ಲವೆಂದು ತಲೆಯಾಡಿಸಿ, ಎದೆ ಮೇಲಿದ್ದ ಕೈಯನ್ನು ತೆಗೆಯದೇ,

‘...ಹೋಗಿ ಹಣ್ಣುಕಾಯಿ ಮಾಡಿಸ್ಕೊಂಡು ಅರ್ಚನೆ ಮಾಡಿಸ್ಕೊಂಡು ಹಿಂದಿರುಗೋಣ...’ ಎಂದು ಕಾಲ್ಗಳಿಗೆ ಚಾಲನೆ ಕೊಟ್ಟ.

‘ಒಂದ್ ಮಾತು ಪ್ರಸಾದಪ್ಪಾ... ತಿರುಗಾ ಬೆಟ್ಟ ಇಳಿಯೋಕೆ ನಾನು ನಿಮ್ಮನ್ನ ಬಿಡೂದಿಲ್ಲ... ಬಸ್ಸಿನಾಗೇ ಹಿಂದಿರುಗಬೇಕು. ನಿಮಗೇನಾದ್ರೂ ಹೆಚ್ಚೂ ಕಮ್ಮಿ ಆದ್ರ ಆಗ ಗತಿ ಏನ್ರಿ...? ನಿಮ್ಮ ಅಪ್ಪ, ಅವ್ವಗ ನಾನು ಮಾರಿ ಹ್ಯಾಂಗ ತೋರಿಸ್ಲಿ...?’

‘ನಾನು ಕಲ್ಲುಂಡಿ ಶಿವಣ್ಣ. ಹೆದ್ರಬೇಡಿ... ನಡೀರಿ.’

ದೇವರ ಸೇವೆಗೆ ನಿಂತರು. ಹಣ್ಣು ಕಾಯಿ ಹೂವು ಸಮರ್ಪಿಸಿ, ಅರ್ಚನೆಗಾಗಿ ಯಾಂತ್ರಿಕವಾಗಿ ಪ್ರಸಾದ ತನ್ನ ಗೋತ್ರ, ನಕ್ಷತ್ರ, ಹೆಸರುಗಳನ್ನ ಉಚ್ಚರಿಸಿದನೇ ಹೊರತು ಅವನಿಗೆ ಆ ದೇವಿಯ ಕಣ್ಣುಗಳನ್ನು ನೋಡುವ ಧೈರ್ಯವೇ ಆಗಲಿಲ್ಲ. ತಾಯಿ ತನ್ನ ಕಣ್ಣುಗಳಿಂದ ಅವನ ಎದೆ ಚುಚ್ಚಿದಂತೆ ಅನ್ನಿಸಿತು. ಕಣ್ಣು ಮುಚ್ಚಿಕೊಂಡುಬಿಟ್ಟ. ಇರಿತದ ನೋವು ಎದೆಯಲ್ಲಿ ತೀರಾ ತೀಕ್ಷ್ಣವಾಯಿತು. ಕೆಲವು ಸಲ ದೇವರ ವಿಗ್ರಹದ ಮುಂದೆ ನಿಂತಾಗ ಭಕ್ತಿಭಾವ ದಲ್ಲಿ ಕಣ್ಣುಮುಚ್ಚಿ ಹೋಗುವುದೂ ಉಂಟು. ಆದರೆ ಇಲ್ಲಿ ಅವನಿಗೆ ಅಂತಹ ಏಕಾಗ್ರತೆ ಉಂಟಾಗದೇ, ದೇವಿಯ ತ್ರಿಶೂಲದ ಚೂಪು ಚುಚ್ಚಿ ಕಣ್ಣಿಂದ ನೀರು ಚಿಮ್ಮುತ್ತಿತ್ತು. ಮಂಗಳಾರತಿ ಎತ್ತಿ ಎಲ್ಲರ ಮುಂದೆ ಜ್ಯೋತಿ ತಂದಾಗಲೂ ಅವನು ಗಮನಿಸದೆ ಕಣ್ಣು ಮುಚ್ಚಿಕೊಂಡೇ ಇದ್ದುದನ್ನು ಕಂಡ ಶಿವಣ್ಣ ಎಚ್ಚರಿಸಿದ.

‘ಪ್ರಸಾದಪ್ಪಾ... ಮಂಗ್ಳಾರ್ತಿ ತೊಗಳ್ರೀ...’

‘ಆಂ?’ ಎಂದ ಗಾಬರಿಯಿಂದ ಕಣ್ಣುಬಿಚ್ಚಿ, ಮಂಗಳಾರತಿ ತೆಗೆದುಕೊಂಡು ಕಣ್ಣಿಗೊತ್ತಿಕೊಂಡು ದಕ್ಷಿಣೆ ಸಮರ್ಪಿಸಿದ.

ಶಿವಣ್ಣ ತನ್ನ ರೋಗಿ ಗೆಳೆಯನನ್ನು ಗಮನಿಸಿದ. ಬೆಟ್ಟದ ಮೇಲೆ ಹತ್ತಿ ಬಂದಾಗಲೂ ಅವನ ಮುಖ ಆಯಾಸ ತೋರಿರಲಿಲ್ಲ. ಆದರೆ ದೇವಿ ಮುಂದೆ ನಿಂತು ಪೂಜೆ ಮುಗಿಸಿಕೊಂಡಾಗ ಅವನ ಮುಖದಲ್ಲಿ ಆಯಾಸ ಹರಡಿ, ಮುಖ ಬಿಳಿಚಿಕೊಂಡು ಬಿಟ್ಟಿತ್ತು. ಈಗ ಶಿವಣ್ಣನಿಗೆ ತನ್ನ ಗೆಲೆಯನಿಗೆ ದೇಹಾ ರೋಗ್ಯಕ್ಕಿಂತ ಯಾವುದೋ ಮನಸ್ಸಿನ ರೋಗ ಕಾಡುತ್ತಿದೆ ಎನ್ನಿಸಿತು. ಮನೋರೋಗಿಗಳ ‘ದೆವ್ವ’ ಬಿಡಿಸುವ ಪೂಜೆಗಳನ್ನು ಅವನು ಕಂಡಿರದೇ ಇರಲಿಲ್ಲ. ಆ ರೀತಿ ಪ್ರಯೋಗ ಈ ಶಹರಿನ ವೇದಾಂಗ ಪಾರಂತ ಬ್ರಾಹ್ಮಣ ಯುವಕನ ಮೇಲೆ ಮಾಡಲಾದೀತೆ?...

ಪ್ರಸಾದನ ಆರೋಗ್ಯವಂತ ದೇಹದ ಒಳಗೆ ಇರುವ ಅನಾರೋಗ್ಯದಿಂದ ಬಳಲುತ್ತಿರುವ ಮನಸ್ಸು ಅರಿಯಬೇಕು. ಇಷ್ಟು ದಿನ ಚಿಕಿತ್ಸೆ ಮಾಡಿದರೂ ಒಂದಿಷ್ಟೂ ಗುಣ ಕಾಣದ ಈ ರೋಗಿಯನ್ನು ಬೊಟ್ಟು ಮಾಡಿ ಜನ ತನ್ನನ್ನು ಅವಹೇಳನ ಮಾಡುತ್ತಾರೆ. ಈಗಾಗಲೇ ಶಿವಣ್ಣ ಇವನಿಗೆ ಕೈ ಮಸಕಿನ ವಿಷ ಹಾಕಿದ್ದಾನೆ, ವಶೀಕರಣ ಮಾಡಿದ್ದಾನೆ ಎಂಬ ವದಂತಿ ಹರಡಿತ್ತು.

ಶಿವಣ್ಣ ಪ್ರಸಾದನ ಕತ್ತಲ ಗುಹೆ ಒಳಹೊಕ್ಕು ಅಲ್ಲಿರುವ ಸತ್ಯವೆಂಬ ಶಮಂತಕ ಮಣಿ ಹಿಡಿದು ತರಬೇಕು ಎಂದುಕೊಂಡ. ಪ್ರಸಾದ ಒಳಗೆ ಬಚ್ಚಿಟ್ಟು ಕೊಂಡಿರುವ ಸತ್ಯವನ್ನು ಯಾರಿಗೂ ಕಾಣದ ಹಾಗೆ ಜೋಪಾನವಾಗಿ ನೋಡಿಕೊಳ್ಳುತ್ತಿದ್ದಾನೆ. ನಾಲಿಗೆ ಒಳಗಿನದ್ದು ಹೊರಗೆ ಎಂದೂ ಇಟ್ಟಿರಲಿಲ್ಲ. ಆದರೆ ಯಾವುದಾದರೊಂದು ಅನಿವಾರ್ಯ ಪ್ರಸಂಗದಲ್ಲಿ ನಾಲಿಗೆ ಸಡಿಲ ಬೀಳಬಹುದಲ್ಲ!

ಶಿವಣ್ಣ ತನ್ನೊಳಗೇ ಅಂದುಕೊಂಡ ‘ಈ ಪೂಜಾರಿ ಲಗ್ನ ಆಗ್ಲಿಕ್ಕೆ ಯಾಕೆ ಒಪ್ತಿಲ್ಲಾ...? ಇವ್ರವ್ವನಿಗೆ ಅದೇ ಕೊರಗು ಆಗ್ಲಿಕ್ಕೆ ಹತ್ತೈತಿ... ಇವ್ರ ತಂದಿ ಹೇಳ್ಯಾರೆ... ನಾನಾರಾ ನಿಂತು ಇವ್ರ ಲಗ್ನ ಆಗೂ ಹಾಂಗೆ ಒತ್ತಾಯ ಮಾಡ್‌ಬ್ಯಾಕು... ಆಗ ಎಲ್ಲಾ ಸರ್‍ಯಾಗುತ್ತೆ.

ಇಬ್ಬರೂ ಹಿಂದಿರುಗಲು ಬೂತಿನಲ್ಲಿ ಟಿಕೇಟು ತೆಗೆದುಕೊಳ್ಳಬೇಕಿತ್ತು. ಶಿವಣ್ಣ ಹೇಳಿದ.

‘ನೀವು ಜರ್‍ರಾ ನಿಂತಿರ್‍ರಿ... ನಾನು ‘ಕ್ಯೂ’ದಾಗ ನಿಂದು ತಿಕೀಟು ತರ್‍ತೀನಿ...’ ಎಂದು ಹೋದ. ಪ್ರಸಾದ ಮತ್ತೊಮ್ಮೆ ಬೆಟ್ಟದ ತುದಿಯಿಂದ ಕೆಳಗಿನ ಮೈಸೂರನ್ನು ನೋಡುತ್ತ ಕಾಲವನ್ನು ದಬ್ಬಿದ.

ಬಸ್ಸು ಬಂದು ಇವರನ್ನು ಏರಿಸಿಕೊಂಡಿತು. ಇಬ್ಬರೂ ಪಕ್ಕ ಪಕ್ಕದಲ್ಲಿ ಕುಳಿತಿದ್ದರೂ, ಪ್ರಸಾದ ಉದ್ದಕ್ಕೂ ತುಟಿ ತೆರೆಯದೇ ಕಿಟಕಿಯಾಚೆ ಮನ ನೆಟ್ಟವನಂತೆ ಯಾವುದೊ ಭೂ ದೃಶ್ಯ ಗಮನಿಸುತ್ತಿರುವಂತೆ ಪಯಣ ಸಾಗಿಸಿದ.

ಶಿವಣ್ಣನೂ ಮಾತಾಡದೆ, ಈ ರೋಗಿಯ ರೋಗದ ಬುಡ ಹುಡುಕಲು ಯತ್ನಿಸುತ್ತಾ ಕುಳಿತ.

ಮೈಸೂರು ಬಂದೇ ಬಿಟ್ಟಿತು. ಇಬ್ಬರೂ ಒಟ್ಟಿಗೆ ಇಳಿದು ನಡೆದರೂ ಅವರವರ ಪ್ರಪಂಚ ಬೇರೆ ಬೇರೆ ಆಗಿಯೇ ಉಳಿದಿತ್ತು.

(ಸಶೇಷ)